ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ , ಪುತ್ತೂರು, ದ.ಕ.

**ಸಿ.ಸಿ.ನಂಬ್ರ.600/2022**

ಪಿರ್ಯಾದಿ : ಒಕ್ಕಲಿಗೆ ಸಮುದಾಯ ಪತ್ತಿನ ಸಹಕಾರಿ ಸಂಘ (ನಿ)

- ಮತ್ತು -

ಆರೋಪಿ : ಅಶ್ವಥ ಕೆ

| | | |
|---|---|---|
| ಆರೋಪಿಯ ಹೆಸರು | : | ಅಶ್ವಥ ಕೆ |
| ತಂದೆಯ ಹೆಸರು | : | ಶ್ರೀನಿವಾಸ ಸುವರ್ಣ |
| ವಯಸ್ಸು | : | 33 ವರ್ಷ |
| ವಾಸ್ತವ್ಯ | : | 2-565 ಪಕೀರ ಪೂಜಾರಿ ಕಾಂಪೌಂಡ್, ಕೊಂಬೆಟ್ಟು, ಪುತ್ತೂರು ಕಸಬ ಗ್ರಾಮ, ಪುತ್ತೂರು ತಾಲೂಕು ದ.ಕ. |
| ದಿನಾಂಕ | : | 31-10-2023 |

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆಃ**

| | |
|---|---|
| | ನಿಮ್ಮ ವಿರುದ್ಧ ಪಿರ್ಯಾದುದಾರರು ಈ ಕೆಳಕಂಡಂತೆ ಸಾಕ್ಷ್ಯವನ್ನು ಮಂಡಿಸಿರುತ್ತಾರೆ. |
| | |
| ಪ್ರಶ್ನೆ ನಂ.1 | ಫ್ರಾ.ಸಾ.1 ನೇಯವರಾದ ತೇಜಸ್ವಿನಿ ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಫ್ರಾಸಾ-1 ನೇಯವರ ಒಕ್ಕಲಿಗೆ ಸಮುದಾಯ ಪತ್ತಿನ ಸಹಕಾರಿ ಸಂಘದಲ್ಲಿ ದಿನಾಂಕ 13-08-2021 ರಂದು ಬಡ್ಡಿದರದಲ್ಲಿ ಸಾಲವನ್ನು ಪಡೆದಿದ್ದು ಆ ಸಾಲದ ಮೊತ್ತವನ್ನು ಮರುಪಾವತಿಸವುದರಲ್ಲಿ ವಿಫಲರಾಗಿದ್ದು ನಂತರ ಫ್ರಾಸಾ-1 ರವರು ಸಾಲದ ಮರುಪಾವತಿಗಾಗಿ ನಿಮ್ಮನ್ನು ಒತ್ತಾಯಿಸಿದಾಗ ನೀವು ನಿ.ಪಿ.1 ಚೆಕ್‌ನ್ನು ರೂ.14,948/- ಫೆಡರಲ್ ಬ್ಯಾಂಕ್ ಪುತ್ತೂರು ಶಾಖೆ, ಚೆಕ್ ನಂಬ್ರ 106664 ದಿನಾಂಕ 10-06-2022 ನೀಡಿ, ಸದರಿ ಖಾತೆಯಲ್ಲಿ ಸಾಕಷ್ಟು ಹಣ ಇದೆ ಎಂದು ನಂಬಿಸಿ ಕೊಟ್ಟಿದ್ದಿರಿ ಎಂದು ಅವರ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.2 | ಫ್ರಾ.ಸಾ.1 ನೇಯವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಮ್ಮ ಭರವಸೆಯ ಮಾತುಗಳನ್ನು ಅವರು ನಂಬಿ ಸದರಿ ನಿಪಿ-1 ಚೆಕ್ಕನ್ನು ತನ್ನ ಬ್ಯಾಂಕಾದ SCDCC |

| | |
|---|---|
| | ಬ್ಯಾಂಕ್ ಮಂಗಳೂರು, ಪುತ್ತೂರು ಶಾಖೆಗೆ ಹಾಜರುಪಡಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕೆ ನಿಪಿ-1 ಚೆಕ್ ಅಮಾನ್ಯಗೊಂಡಿದ್ದು, ಈ ಬಗ್ಗೆ ನಿಪಿ-2 ರಂತೆ "Funds Insufficient" ಎಂಬ ಹಿಂಬರಹವನ್ನು ದಿನಾಂಕ 14-06-2022 ರಂದು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.3 | ಫ್ರಾ.ಸಾ.1 ನೇಯವರು ತಮ್ಮ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯವಾದ ಕುರಿತು ದಿನಾಂಕ 30-06-2022 ರಂದು ನಿಪಿ-3 ರಂತೆ ಫ್ರಾ.ಸಾ.1 ನೇಯವರು ತನ್ನ ವಕೀಲರ ಮೂಲಕ ನಿಮಗೆ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ನಿಪಿ-4 ರಂತೆ ನಿಮಗೆ ನೋಟೀಸು ಜಾರಿಯಾಗಿದ್ದು ನೀವು ನೋಟೀಸು ಸ್ವೀಕರಿಸಿರುತ್ತೀರಿ ಹಾಗೂ ನೀವು ಯಾವುದೇ ಪ್ರತ್ಯುತ್ತರ ನೋಟೀಸನ್ನು ನೀಡಿಲ್ಲ ಹಾಗೂ ಮೇಲೆ ಹೇಳಿದ ಹಣವನ್ನು ಫ್ರಾ.ಸಾ.1 ನೇಯವರಿಗೆ ಪಾವತಿಸಿಲ್ಲ ಎಂದು ಅವರು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.4 | ಫ್ರಾ.ಸಾ.1 ನೇಯವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ನಿಮಗೆ ತಿಳಿದಿದ್ದರೂ ಕೂಡ ನೀವು ಯಾವುದೇ ವ್ಯವಸ್ಥೆ ಮಾಡದೇ ದುರುದ್ದೇಶಪೂರ್ವಕವಾಗಿ ನಿಪಿ-1 ಚೆಕ್ಕನ್ನು ಫ್ರಾ.ಸಾ.1 ನೇಯವರಿಗೆ ನೀಡಿ ಅದು ಅಮಾನ್ಯಗೊಂಡ ಆರೋಪವು ನೆಗೋಶ್ಯೆಬಲ್ ಇನ್ಸ್ಟುಮೆಂಟ್ ಆ್ಯಕ್ಟ್ ನ ಸೆಕ್ಷನ್ 138 ರಡಿಯಲ್ಲಿ ಮತ್ತು ಭಾರತೀಯ ದಂಡ ಸಂಹಿತೆ ಕಾಯಿದೆಯಡಿಯಲ್ಲಿ ನೀವು ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.5 | ಫ್ರಾ.ಸಾ.1 ನೇಯವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಫ್ರಾ.ಸಾ.1 ನೇಯವರು ನೀಡಿದ ದೂರಿನನ್ವಯ ನ್ಯಾಯದ ಹಿತದೃಷ್ಟಿಯಿಂದ ಮತ್ತು ಕಾನೂನಿನ ದೃಷ್ಟಿಯಿಂದ ನಿಮ್ಮನ್ನು ವಿಚಾರಣೆಗೊಳಪಡಿಸಿ, ನಿಮಗೆ ಶಿಕ್ಷೆಯನ್ನು ವಿಧಿಸಬೇಕೆಂದು ಹಾಗೂ ಅವರಿಗೆ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಸಾಕ್ಷ್ಯ ನುಡಿದಿದ್ದು ತಮ್ಮ ಪರ ನಿಪಿ-1 ರಿಂದ 6 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಉತ್ತರಃ | |

| | |
|---|---|
| ಪ್ರಶ್ನೆ ನಂ.6 | ಈ ಬಗ್ಗೆ ನೀವೇನಾದರೂ ಹೆಚ್ಚಿಗೆ ಹೇಳುವುದಿದೆಯಾ ? |
| ಉತ್ತರಃ | |
| ಪ್ರಶ್ನೆ ನಂ.7 | ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯಾ ? |
| ಉತ್ತರಃ | |

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಸಂಪೂರ್ಣ ಮತ್ತು ಸತ್ಯವಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ..ದಂಡಾಧಿಕಾರಿ,ಪುತ್ತೂರು, ದ.ಕ.